KAMS200002742022

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ,**
**ಹೆಚ್.ಡಿ.ಕೋಟೆ**

:ಉಪಸ್ಥಿತರು :

ಶ್ರೀ ಮಹೇಶ್ ಬಿ.ಟಿ. ಬಿ.ಕಾಂ., ಎಲ್.ಎಲ್.ಎಂ.,
ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ,
ಹೆಚ್.ಡಿ.ಕೋಟೆ

ದಿನಾಂಕ: 18 ನೇ ನವೆಂಬರ್ 2025

**ಅಸಲು ದಾವಾ ಸಂಖ್ಯೆ 97/2022**

ವಾದಿ/ಯರು : ಸಣ್ಣದೇವಮ್ಮ

-ವಿರುದ್ಧ-

ಪ್ರತಿವಾದಿ/ಯರು : ಜವರನಾಯಕ ಮತ್ತು ಇತರರು

**ಮಧ್ಯಂತರ ಅರ್ಜಿ.11 ರ ಪಕ್ಷಕಾರರು**

ಅರ್ಜಿದಾರು/ಪ್ರತಿವಾದಿಗಳು : ಜವರನಾಯಕ ಮತ್ತು ಇತರರು

-- (ಪ್ರತಿವಾದಿಗಳು )

-ವಿರುದ್ಧ-

ಎದುರುದಾರರರು/ವಾದಿಗಳು : ಸಣ್ಣದೇವಮ್ಮ

-- (ವಾದಿ )

**ಮಧ್ಯಂತರ ಅರ್ಜಿ ಸಂಖ್ಯೆ.XI ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರ ರಡಿ ಅರ್ಜಿ**

ಅರ್ಜಿದಾರರು ಈ ಮೇಲ್ಕಂಡ ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವ ಕಾರಣಗಳಿಂದಾಗಿ ಅರ್ಜಿದಾರರು/5 ನೇ ಪ್ರತಿವಾದಿ ತಮ್ಮ ದಾವೆಯಲ್ಲಿನ ಪ್ರತಿವಾದ ಪತ್ರದಲ್ಲಿ ಈ ಮುಂದೆ ಸೂಚಿಸಿರುವಂತೆ ತಿದ್ದುಪಡಿ ಮಾಡಲು ಮತ್ತು ಕೆಳಗಿನ ವಾಕ್ಯಗಳನ್ನು ಸೇರಿಸಲು ಘನ ನ್ಯಾಯಾಲಯದಲ್ಲಿ ಅನುಮತಿಯನ್ನು ನೀಡಬೇಕೆಂದು ಕೇಳಿಕೊಂಡಿತ್ತಾರೆ.

**ಉದ್ದೇಶಿತ ತಿದ್ದುಪಡಿಗಳು**

ಪ್ರತಿವಾದಪತ್ರದ 7 ನೇ ಕಂಡಿಕೆಯಾಗಿ ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಮಹದೇವಮ್ಮ ಬಿನ್ ಲೇಟ್ ಚನ್ನನಾಯಕ ಎಂಬುವವರ ಹೆಸರು ಸಹ ನಮೂದಾಗಿರುತ್ತದೆ. ಸದರಿ ಮಹದೇವಮ್ಮನವರು ಕಾಣೆಯಾಗಿರುತ್ತಾರೆಂದು ಈ ದಾವೆಯಲ್ಲಿ ಸಾಕ್ಷಿದಾರರಾಗಿರುವ ಸಿ.ಆರ್.ಸೋಮನಾಯಕರವರು ದಿನಾಂಕ:05.06.2013 ರಂದು ಮೈಸೂರಿನ ದೇವರಾಜ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ. ಸದರಿ ಮಹದೇವಮ್ಮನವರು ಕಾಣೆಯಾಗಿ ಸುಮಾರು 10 ವರ್ಷಗಳು ಕಳೆದುಹೋಗಿರುವುದರಿಂದ, ಸದರಿ ಮಹದೇವಮ್ಮರವರು ಮರಣ ಹೊಂದಿರಬಹುದೆಂದು ಪರಿಗಣಿಸುಬಹುದಾಗಿದ್ದು, ಸದರಿ ಮಹದೇವಮ್ಮನವರ ವಾರಸುದಾರರಿಗೆ ದಾವಾ ಆಸ್ತಿಯಲ್ಲಿ ಭಾಗಾಂಶದ ಹಕ್ಕು ಮತ್ತು ಹಿತಸಂಬಂಧವಿದ್ದು, ಈ ದಾವೆಯಲ್ಲಿ ಮಹದೇವಮ್ಮನವರ ವಾರಸುದಾರರನ್ನು ಸೇರಿಸಿರುವುದಿಲ್ಲ. ಆದ್ದರಿಂದ ವಾದಿಯು ಸಲ್ಲಿಸಿರುವ ದಾವೆಯು ಊರ್ಜಿತವಾಗಿರುವುದಿಲ್ಲ ಎಂದು ತಿದ್ದುಪಡಿಯಾಗಬೇಕಾಗಿರುತ್ತದೆ. ಪ್ರತಿವಾದಪತ್ರದ 8 ನೇ ಕಂಡಿಕೆಯಾಗಿ ಈ ದಾವೆಯ 6 ಮತ್ತು 7 ನೇ ಪ್ರತಿವಾದಿಗಳಿಗೂ 1 ರಿಂದ 5 ಮತ್ತು 8 ನೇ ಪ್ರತಿವಾದಿಗಳಿಗೂ

ಮನಸ್ತಾಪವಿರುವ ಕಾರಣ ಹಾಗೂ 6 ಮತ್ತು 7 ನೇ ಪ್ರತಿವಾದಿಗಳು ವಾದಿಗೆ ಸ್ವಂತ ಸಂಬಂಧಿಗಳಾಗಿರುವುದರಿಂದ, ವಾದಿಗೆ ಅನುಕೂಲವಾಗುವಂತೆ ಹಾಗೂ 1 ರಿಂದ 5 ಮತ್ತು 8 ನೇ ಪ್ರತಿವಾದಿಗಳಿಗೆ ಪ್ರತಿಕೂಲವಾಗುವಂತೆ ಪ್ರತಿವಾದಪತ್ರವನ್ನು ಸಲ್ಲಿಸಿರುತ್ತಾರೆ ಎಂದು ತಿದ್ದುಪಡಿಯಾಗಬೇಕಾಗಿರುತ್ತದೆ

2. ಅರ್ಜಿದಾರರು/5 ನೇ ಪ್ರತಿವಾದಿ ತಮ್ಮ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸಿರುವಂತೆ, ವಾದಿಯು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ನಿರ್ಥಿಷ್ಟ ಕರಾರು ಅನುಷ್ಟಾನಕ್ಕಾಗಿ ದಾವೆಯನ್ನು ಸಲ್ಲಿಸಿರುತ್ತಾರೆ. ಈ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ, ವಾದಿಯು ಪ್ರತಿವಾದಿಯಗಳ ವಿರುದ್ದ ದಾವಾ ಆಸ್ತಿಗಳ ಸಂಬಂಧ ದಾವೆಯನ್ನು ಸಲ್ಲಿಸಿದ್ದು, ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಮಹದೇವಮ್ಮ ಬಿನ್ ಲೇಟ್.ಚನ್ನನಾಯಕ ಎಂಬುವವರ ಹೆಸರು ನಮೂದಾಗಿದ್ದು, ವಾದಿಯು ಸಲ್ಲಿಸಿರುವ ಕ್ರಯದ ಕರಾರು ಪತ್ರದಲ್ಲಿಯೂ ಸಹ ಮಹದೇವಮ್ಮನವರ ಹೆಸರು ನಮೂದಾಗಿರುತ್ತದೆ. ಸದರಿ ಮಹದೇವಮ್ಮನವರು ಕಾಣೆಯಾಗಿರುತ್ತಾರೆಂದು ಈ ದಾವೆಯಲ್ಲಿ ಸಾಕ್ಷಿದಾರರಾಗಿರುವ ಸಿ.ಆರ್.ಸೋಮನಾಯಕರವರು ಮೈಸೂರಿನ ದೇವರಾಜ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ. ಸದರಿ ಮಹದೇವಮ್ಮನವರು ಕಾಣೆಯಾಗಿ ಸುಮಾರು 10 ವರ್ಷಗಳು ಕಳೆದುಹೋಗಿರುವುದರಿಂದ, ಸದರಿ ಮಹದೇವಮ್ಮರವರು ಮರಣ ಹೊಂದಿರಬಹುದೆಂದು ಪರಿಗಣಿಸಬಹುದಾಗಿದ್ದು, ಸದರಿ ಮಹದೇವಮ್ಮನವರ ವಾರಸುದಾರರಿಗೂ ಸಹ ದಾವಾ ಆಸ್ತಿಯಲ್ಲಿ ಕಾನೂನುಬದ್ಧ ಭಾಗಾಂಶದ ಹಕ್ಕು ಇರುವುದರಿಂದ ಈ ದಾವೆಯಲ್ಲಿ ಕೇಳಿರುವ ತಿದ್ದುಪಡಿಯು ಅತ್ಯಾವಶ್ಯಕವಾಗಿರುತ್ತದೆ. ಮಹದೇವಮ್ಮನವರು ಕಾಣೆಯಾಗಿರುವ ಬಗ್ಗೆ ದಾಖಲಾತಿ ಲಭ್ಯವಿಲ್ಲದ ಕಾರಣ, ಈ ವಿಚಾರವನ್ನು 5 ನೇ ಪ್ರತಿವಾದ ಪತ್ರದಲ್ಲಿ ಸೇರಿಸಿರುವುದಿಲ್ಲ. ದಿನಾಂಕ:05.06.2013 ರಲ್ಲಿ ಮಹದೇವಮ್ಮನವರು ಕಾಣೆಯಾಗಿರುವ

ಎಫ್.ಐ.ಆರ್ ಲಭ್ಯವಿರುತ್ತದೆ ಹಾಗೂ 6 ಮತ್ತು 7 ನೇ ಪ್ರತಿವಾದಿಗಳು ವಾದಿಯೊಂದಿಗೆ ಶಾಮೀಲಾಗಿರುವ ವಿಚಾರ ಈಗ ತಿಳಿದುಬಂದಿರುವುದರಿಂದ, ಪ್ರತಿವಾದಿ 5 ರವರು ಅರ್ಜಿಯಲ್ಲಿ ಕೇಳಿರುವಂತೆ ತಿದ್ದುಪಡಿ ಕೋರಿ ಈ ಅರ್ಜಿಯಲ್ಲಿ ತಂದಿರುತ್ತೆನೆ. ಹಾಗಾಗಿ ಘನನ್ಯಾಯಾಲಯವು ನ್ಯಾಯಾಲಯದಲ್ಲಿ ಪುರಷ್ಕರಿಸಿದಲ್ಲಿ ವಾದಿಯವರಿಗೆ ಯಾವುದೇ ರೀತಿಯ ತೊಂದರೆ ಉಂಟಾಗುವುದಿಲ್ಲ. ಬದಲಿಗೆ, ನನ್ನ ಈ ಅರ್ಜಿಯನ್ನು ತಿರಸ್ಕರಿಸಿದಲ್ಲಿ ನನಗೆ ತುಂಬಲಾರದ ನಷ್ಟ ಮತ್ತು ಹಾನಿ ಉಂಟಾಗುತ್ತದೆ. ಆದ್ದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

3. ವಾದಿರವರು ಸದರಿ ಮೇಲ್ಕಂಡ ಅರ್ಜಿಗೆ ತಕರಾರನ್ನು ಸಲ್ಲಿಸಿದ್ದು, 5 ನೇ ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯು ಕಾನೂನಿನ ದೃಷ್ಟಿಯಿಂದಾಗಲಿ ಅಥವಾ ವಾಸ್ತವಾಂಶದ ದೃಷ್ಟಿಯಿಂದಾಗಲಿ ಕೂಡಿರುವುದಿಲ್ಲ ಆದ್ದರಿಂದ ವಜಾಮಾಡಬಹುದಾಗಿರುತ್ತದೆ. 5 ನೇ ಪ್ರತಿವಾದಿಯು ಪ್ರತಿವಾದ ಪತ್ರ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸಿದ್ದು, ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿದ್ದು, ಕೇವಲ ಅರ್ಜಿ ಸಲ್ಲಿಸುವ ಸಲುವಾಗಿ ಸೃಷ್ಟಿಸಿಕೊಂಡ ಸಂಗತಿಗಳಾಗಿರುತ್ತವೆ. 5 ನೇ ಪ್ರತಿವಾದಿಯು ತನ್ನ ಪರ ವಿಚಾರಣೆಗಾಗಿ ದಿನಾಂಕ ನಿಗಧಿಯಾಗಿದ್ದು, ನಿಗಧಿಯಾದ ದಿನಾಂಕದಂದು ವಿಚಾರಣೆ ಮಾಡದೇ ಇರುವ ಕಾರಣ ದಾವೆಯನ್ನು ವಾದ ಮಂಡನೆಗಾಗಿ ದಿನಾಂಕ:07.03.2025 ರಂದು ನಿಗಧಿಯಾಗಿತ್ತು. ಈ ದಿನಾಂಕದಂದು ಪ್ರತಿವಾದಿಯು ಮಧ್ಯಾಂತರ ಅರ್ಜಿಯನ್ನು ಸಲ್ಲಿಸಿದ್ದು. ಈ ಅರ್ಜಿಯನ್ನು ಕೇವಲ ಕಾಲಹರಣ ಮಾಡುವ ಉದ್ದೇಶವನ್ನು 5 ನೇ ಪ್ರತಿವಾದಿಯು ಹೊಂದಿರುತ್ತಾರೆ.

4. ಮುಂದುವರೆದಿದು, 5 ನೇ ಪ್ರತಿವಾದಿಯು ತಿದ್ದುಪಡಿ ಮಾಡಲು ಕೋರಿರುವ ಸಂಗತಿಯು ಈಗಾಗಲೇ ಕರಾರು ಪತ್ರದಲ್ಲಿ ಮಹದೇವಮ್ಮ ಬಿನ್

ಲೇಟ್ ಚನ್ನನಾಯಕ ಎಂಬುವವರು ಕಾಣೆಯಾಗಿರುವ ಬಗ್ಗೆ ನಮೂದಾಗಿದ್ದು, ನಂತರ ಸದರಿ ಮಹದೇವಮ್ಮನವರ ಗಂಡ ಈ ದಾವೆಯಲ್ಲಿ ಸಾಕ್ಷಿದಾರರಾಗಿ ಸಾಕ್ಷಿ ನುಡಿದಿದ್ದು, ಸದರಿ ಮಹದೇವಮ್ಮ ನಿಧನ ಹೊಂದಿರುವ ಬಗ್ಗೆ ಗೌರವಾನ್ವಿತ ಹೆಚ್.ಡಿ.ಕೋಟೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಡಿಕ್ರಿಯನ್ನು ಪಡೆದುಕೊಂಡಿರುತ್ತಾರೆ. ಅದೇ ರೀತಿ ಈ ಹಿಂದೆ ವಾದಿಯು ಮಹದೇವಮ್ಮನವರ ವಾರಸುದಾರರನ್ನು ಪಾರ್ಟಿದಾರರನ್ನಾಗಿ ದಾವೆಯಲ್ಲಿ ಸೇರಿಸಲು ಮಧ್ಯಾಂತರ ಅರ್ಜಿಯನ್ನು ಸಹ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯು ಆದೇಶಕ್ಕಾಗಿ ಕಾಯ್ದಿರಿಸಲಾಗಿದೆ ಈ ಎಲ್ಲಾ ಸಂಗತಿಗಳು 5 ನೇ ಪ್ರತಿವಾದಿಗೆ ತಿಳಿದಿದ್ದರು ಸಹ ಹಾಗೂ ಮಹದೇವಮ್ಮನ ವಾರಸುದಾರರನ್ನು ದಾವೆಯಲ್ಲಿ ಸೇರಿಸಲು ಅರ್ಜಿ ಹಾಕಿರುವ ಸಂಗತಿ ತಿಳಿದಿದ್ದರು ಸಹ ಉದ್ದೇಶಪೂರ್ವಕವಾಗಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದ ಪತ್ರದಲ್ಲಿ 8 ನೇ ಕಂಡಿಕೆಯಾಗಿ ಸೇರಿಸಲು ಕೇಳಿರುವ ಸಂಗತಿಗಳು ಕೇವಲ ಸೃಷ್ಟಿಸಿಕೊಂಡ ಸಂಗತಿಗಳಾಗಿದ್ದು ಹಾಗೂ ಇತರೆ ಪ್ರತಿವಾದಿಗಳಿಗೆ ಕರಾರು ಪತ್ರದ ಸಂಗತಿ ತಿಳಿದಿದ್ದು ಹಾಗೂ ಸದರಿ ಕರಾರು ಪತ್ರದ ಷರತ್ತನ್ನು ಪಾಲಿಸಲು ಸಿದ್ಧರಿದ್ದರೂ 5 ನೇ ಪ್ರತಿವಾದಿಯು ಉದ್ದೇಶಪೂರ್ವಕವಾಗಿ ಈ ಸಂಗತಿಯನ್ನು ಪ್ರತಿವಾದ ಪತ್ರದಲ್ಲಿ ಸೇರಿಸಲು ಕೋರಿರುವುದು ಕಾನೂನಿನ ಅಡಿಯಲ್ಲಿ ಆಸ್ಪದವಿರುವುದಿಲ್ಲ. 5 ನೇ ಪ್ರತಿವಾದಿಯು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಿದರೆ ವಾದಿಗೆ ತುಂಬಲಾರದ ನಷ್ಟ ಹಾಗೂ ಅನಾನುಕೂಲ ಉಂಟಾಗುತ್ತದೆ ಆದರೆ ಅರ್ಜಿಯನ್ನು ವಜಾ ಮಾಡಿದರೆ ಪ್ರತಿವಾದಿಗಳಿಗೆ ಯಾವುದೇ ನಷ್ಟ ಹಾಗೂ ಅನಾನುಕೂಲ ಉಂಟಾಗುವುದಿಲ್ಲ. ಆದ್ದರಿಂದ 5 ನೇ ಪ್ರತಿವಾದಿ ಸಲ್ಲಿಸಿರುವ ಈ ಮಧ್ಯಾಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ.

5. ವಾದಿ ಮತ್ತು ಪ್ರತಿವಾದಿಗಳ ವಾದ ಮತ್ತು ತಕರಾರರನ್ನು ಕೇಳಲಾಯಿತು.

6. ಈ ದಾವೆಯನ್ನು ವಾದಿಯು ಪ್ರತಿವಾದಿಗಳ ವಿರುದ್ಧ ಕರಾರು ನಿರ್ಧಿಷ್ಟ ಅನುಷ್ಟಾನಕ್ಕಾಗಿ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಈ ದಾವೆಯು ಪ್ರತಿವಾದಿಗಳ ಸಾಕ್ಷಿ ವಿಚಾರಣೆಗೆಂದು ನಿಗದಿಯಾದ ಸಮಯದಲ್ಲಿ ಪ್ರಸ್ತುತ ಅರ್ಜಿಯಲ್ಲಿ 5 ನೇ ಪ್ರತಿವಾದಿಯು ಪ್ರಸ್ತುತ ಮಧ್ಯಾಂತರ ಅರ್ಜಿಯನ್ನು ಸಲ್ಲಿಸಿದ್ದು.

7. ಮುಂದುವರೆದಿದು, 5 ನೇ ಪ್ರತಿವಾದಿಯು ತಿದ್ದುಪಡಿ ಮಾಡಲು ಕೋರಿರುವ ಸಂಗತಿಯು ಈಗಾಗಲೇ ಕರಾರು ಪತ್ರದಲ್ಲಿ ಮಹದೇವಮ್ಮ ಬಿನ್ ಲೇಟ್ ಚನ್ನನಾಯಕ ಎಂಬುವವರು ಕಾಣೆಯಾಗಿರುವ ಬಗ್ಗೆ ನಮೂದಾಗಿದ್ದು, ನಂತರ ಸದರಿ ಮಹದೇವಮ್ಮನವರ ಗಂಡ ಈ ದಾವೆಯಲ್ಲಿ ಸಾಕ್ಷಿದಾರರಾಗಿ ಸಾಕ್ಷಿ ನುಡಿದಿದ್ದು, ಸದರಿ ಮಹದೇವಮ್ಮ ನಿಧನ ಹೊಂದಿರುವ ಬಗ್ಗೆ ಗೌರವಾನ್ವಿತ ಹೆಚ್.ಡಿ.ಕೋಟೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಡಿಕ್ರಿಯನ್ನು ಪಡೆದುಕೊಂಡಿರುತ್ತಾರೆ. ಅದೇ ರೀತಿ ಈ ಹಿಂದೆ ವಾದಿಯು ಮಹದೇವಮ್ಮನವರ ವಾರಸುದಾರರನ್ನು ಪಾರ್ಟಿದಾರರನ್ನಾಗಿ ದಾವೆಯಲ್ಲಿ ಸೇರಿಸಲು ಮದ್ಯಾಂತರ ಅರ್ಜಿಯನ್ನು ಸಹ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯು ದಿನಾಂಕ 11.01.2023 ರಂದು ತಿರಿಸ್ಕರಿಸಿಕೊಂಡಿರುತ್ತದೆ. ಈ ಎಲ್ಲಾ ಸಂಗತಿಗಳು 5 ನೇ ಪ್ರತಿವಾದಿಗೆ ತಿಳಿದಿದ್ದರು ಸಹ ಹಾಗೂ ಮಹದೇವಮ್ಮನ ವಾರಸುದಾರರನ್ನು ದಾವೆಯಲ್ಲಿ ಸೇರಿಸಲು ಈ ಹಿಂದೆ ಅರ್ಜಿ ಹಾಕಿರುವ ಸಂಗತಿ ತಿಳಿದಿದ್ದರು ಸಹ ಉದ್ದೇಶಪೂರ್ವಕವಾಗಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇದು ವರತ್ತಾಗಿಯು ಸಹ ಅರ್ಜಿದಾರರು ಮಹದೇವಮ್ಮನವರು ಈ ಹಿಂದೆ ಕಾಣೆಯಾಗಿರುತ್ತಾರೆಂದು ಹೇಳಿ ನೀಡಿರುವ ದೂರಿನ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿರುವುದಿಲ್ಲ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಈ ಹಿಂದೆ ವಾದಿರವರು ನ್ಯಾಯಾಲಯದಲ್ಲಿ ಸದರಿ ಮಹದೇವಮ್ಮನವರ ವಾರಸುದಾರರನ್ನು ಪಕ್ಷಗಾರನ್ನಾಗಿ ಮಾಡಬೇಕೆಂದು

ಕೋರಿ ಅರ್ಜಿಯನ್ನು ಸಲ್ಲಿಸಿದು ಇದೇ ನ್ಯಾಯಾಲಯವು ಆ ಅರ್ಜಿಯನ್ನು ತಿರಸ್ಕರಿಸಿರುತ್ತದೆ. ಆದುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಈ ಕೆಳಕಂಡಂತೆಃ

**ಆದೇಶ**

ಅರ್ಜಿದಾರರು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ XI ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರಡಿಯಲ್ಲಿ ಉದ್ದೇಶಿತ ತಿದ್ದುಪಡಿಯ ಅರ್ಜಿಯನ್ನು ವಜಾಗೊಳಿಸಲಾಗಿದೆ.

(ಮೇಲಿನ ಆದೇಶವನ್ನು ಶೀಘ್ರಲಿಫಿಗಾರಿನಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ನಂತರ ಓದಿ ತಿದ್ದುಪಡಿ ಮಾಡಿ ಸಹಿ ಮಾಡಿ ಇಂದು **ದಿನಾಂಕಃ 18ನೇ ನವೆಂಬರ್ 2025 ರಂದು** ತೆರೆದ ನ್ಯಾಯಾಲಯದಲ್ಲಿ ಪ್ರಸಿದ್ದಿಪಡಿಸಲಾಯಿತು).

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಹೆಚ್.ಡಿ.ಕೋಟೆ